KACM210028032021

**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕಡೂರು.**

ದಿನಾಂಕ 06 ನೇ ಮಾಹೆ ಜುಲೈ 2026

**::ಉಪಸ್ಥಿತರು::**

**ಶ್ರೀ ಮಂಜುನಾಥಚಾರಿ ಡಿ.ಕೆ.,**

**ಬಿ.ಎ. ಎಲ್‌ಎಲ್.ಬಿ.**

**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕಡೂರು.**

ಅಸಲು ದಾವಾ ಸಂಖ್ಯೆ.403/2021

ವಾದಿಃ ಶ್ರೀಮತಿ. ನಾನ್ಕಿಬಾಯಿ
ಕೋಂ ಲೇಟ್ ಹುಲಿಯಾನಾಯ್ಕ,
ವಯಸ್ಸು ಸುಮಾರು 72 ವರ್ಷ,
ವ್ಯವಸಾಯಗಾರರು,
ವಾಸಃ ಸೋಮನಹಳ್ಳಿತಾಂಡ್ಯ ಗ್ರಾಮ,
ಸಿಂಗಟಗೆರೆ ಹೋಬಳಿ, ಕಡೂರು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.
**(ಪರವಾಗಿಃ ಶ್ರೀ ಎಸ್.ಸಿ.ಎನ್., ವಕೀಲರು)**

ವಿರುದ್ಧ

ಪ್ರತಿವಾದಿಗಳು : 1. ಶ್ರೀ. ವಿರುಪಾಕ್ಷಪ್ಪ
ಬಿನ್ ಪಕೀರಪ್ಪ,
ವಯಸ್ಸು ಸುಮಾರು 45 ವರ್ಷ,

KACM210028032021

ವ್ಯವಸಾಯಗಾರರು,
ವಾಸಃ ಹಂಗೂರ ಹಟ್ಟಿ ಗ್ರಾಮ, ಬಾಣಾವಾರ
ಹೋಬಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

2. ಶ್ರೀ. ಮಲ್ಲೇಶಪ್ಪ ಬಿನ್ ಸಿದ್ದಪ್ಪ,
ವಯಸ್ಸು ಸುಮಾರು 47 ವರ್ಷ,
ವ್ಯವಸಾಯಗಾರರು,
ವಾಸಃ ಕೆಂಗೂರು ಹಟ್ಟಿ ಗ್ರಾಮ, ಬಾಣಾವಾರ
ಹೋಬಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

3. ಶ್ರೀ. ಕುಮಾರ ಬಿನ್ ಸಿದ್ದಪ್ಪ,
ವಯಸ್ಸು ಸುಮಾರು 42 ವರ್ಷ,
ವ್ಯವಸಾಯಗಾರರು,
ವಾಸಃ ಕೆಂಗೂರ ಹಟ್ಟಿ ಗ್ರಾಮ, ಬಾಣಾವಾರ ಹೋಬಳಿ,
ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

(1-2 ಪ್ರತಿವಾದಿ ಪರ ಶ್ರೀ ಎಂ.ಎಸ್.ಎಲ್., ವಕೀಲರು
3 ನೇ ಪ್ರತಿವಾದಿ ವಿರುದ್ಧ ದಾವೆಯನ್ನು ವಜಾಗೊಳಿಸಲಾಗಿದೆ)

| | | |
|---|---|---|
| ದಾವಾ ಹೂಡಿದ ದಿನಾಂಕ | : | 18.08.2021 |
| ದಾವಾ ಸ್ವರೂಪ | : | ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ |
| ಸಾಕ್ಷ್ಯ ಪ್ರಾರಂಭಿಸಿದ ದಿನಾಂಕ | : | 18.07.2023 |
| ತೀರ್ಪಿನ ದಿನಾಂಕ | : | 06.07.2026 |

KACM210028032021

| | | |
|---|---|---|
| ತೀರ್ಪು ನೀಡಲು ತೆಗೆದುಕೊಂಡ ಒಟ್ಟು ಸಮಯ | : | ದಿನಗಳು ತಿಂಗಳು ವರ್ಷ<br>19 10 04 |

Sd/-

(ಮಂಜುನಾಥಚಾರಿ ಡಿ. ಕೆ.)

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ

ಕಡೂರು.

:: **ತೀರ್ಪು** ::

ವಾದಿಯು ಈ ದಾವೆಯನ್ನು ದಾವಾ ಸ್ವತ್ತಿನ ಸಂಬಂಧವಾಗಿ ಶಾಶ್ವತ ನಿರ್ಬಂಧಕಾಜ್ಞೆ ಹಾಗೂ ಇತರ ಪರಿಹಾರಗಳನ್ನು ಕೋರಿ ಸಲ್ಲಿಸಿರುತ್ತಾರೆ.

**2. ದಾವೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ** :

ವಾದಿಯು ತನ್ನ ವಾದ ಪತ್ರದಲ್ಲಿ ಹೇಳಿರುವುದೇನೆಂದರೆ, ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ಸಿಂಗಟಗೆರೆ ಹೋಬಳಿ, ಸೋಮನಹಳ್ಳಿ ಗ್ರಾಮದ ಸರ್ವೆ ನಂ.205, ವಿಸ್ತೀರ್ಣ 5 ಎಕರೆ ದಾವಾ ಸ್ವತ್ತು ಮೂಲತಃ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರಿಗೆ ಸಾಗುವಳಿ ಚೀಟಿ ಸಂಖ್ಯೆ:4/1980-81/ಜಿ.ಡಿ.ಆರ್.59/70-71 ರಂತೆ ದಿನಾಂಕ 30.06.1980 ರಂದು ಕಡೂರಿನ ತಹಶೀಲ್ದಾರ್ ರವರು ಕೆಲವೊಂದು ಷರತ್ತುಗಳೊಂದಿಗೆ

KACM210028032021

ಸರ್ಕಾರದಿಂದ ಉಚಿತವಾಗಿ ಮಂಜೂರು ಮಾಡಿರುತ್ತಾರೆ. ನಂತರ ಮ್ಯೂಟೇಶನ್ ಸಂಖ್ಯೆ:1/1980-81 ರಂತೆ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರ ಹೆಸರಿನಲ್ಲಿ ಖಾತೆ ಬದಲಾವಣೆಯಾಗಿದ್ದು, ಸದರಿ ಸ್ವತ್ತಿನಲ್ಲಿ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ಕೃಷ್ಣ ನಾಯ್ಕ ರವರು ಅವಿವಾಹಿತರಾಗಿ ಮೃತರಾಗಿರುತ್ತಾರೆ. ಸದರಿ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರು ದಿನಾಂಕ 15.02.1999 ರಂದು ತನ್ನ ಸ್ವಂತ ಅಕ್ಕನ ಮಗಳಾಗಿರುವ ವಾದಿಯ ಪರವಾಗಿ ತನ್ನನ್ನು ವಾದಿಯು ಪ್ರೀತಿ ಮತ್ತು ವಾತ್ಸಲ್ಯದಿಂದ ನೋಡಿಕೊಂಡು ಬಂದಿರುವ ಕಾರಣ ದಾವಾ ಸ್ವತ್ತಿನ ಸಂಬಂಧ ಮರಣ ಶಾಸನ ಬರೆದಿರುತ್ತಾರೆ. ಸದರಿ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ಮರಣದ ನಂತರ ಮರಣ ಶಾಸನದನುಸಾರ ದಾವಾ ಸ್ವತ್ತಿನ ಖಾತೆಯು ವಾದಿಯ ಹೆಸರಿಗೆ ಬದಲಾಗಿದ್ದು, ವಾದಿಯು ದಾವಾ ಸ್ವತ್ತಿನಲ್ಲಿ ಕಾನೂನುಬದ್ಧ ಮಾಲೀಕರಾಗಿ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ಹೀಗಿರಬೇಕಾದರೆ ಪ್ರತಿವಾದಿಗಳು ದಿನಾಂಕ 17.07.2021 ರಂದು ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ ಮತ್ತು ಸ್ವಾಧೀನಾನುಭವ ಇಲ್ಲದಿದ್ದರೂ ಸಹ ವಾದಿಯ ಶಾಂತಿಯುತ ಸ್ವಾಧೀನವನ್ನು ಹೊಂದುವ ಬಗ್ಗೆ ಕಿರುಕುಳ ನೀಡಿರುತ್ತಾರೆ. ಹಾಗಾಗಿ ವಾದಿಯು ಈ ದಾವೆಯನ್ನು ಸಲ್ಲಿಸಿ ದಾವಾ ಸ್ವತ್ತಿನಲ್ಲಿನ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ಕಿರುಕುಳ ನೀಡಬಾರದೆಂದು ಪ್ರಾರ್ಥಿಸಿರುತ್ತಾರೆ.

KACM210028032021

**3.** ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ಈ ದಾವೆಯಲ್ಲಿ ಹಾಜರಾಗಿದ್ದು, ತಮ್ಮ ಪರವಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿಕೊಂಡಿರುತ್ತಾರೆ. ಸದರಿ ಪ್ರತಿವಾದ ಪತ್ರದಲ್ಲಿ ತಿಳಿಸಿರುವುದೇನೆಂದರೆ, ದಾವಾ ಸ್ವತ್ತು ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರಿಗೆ ಸರ್ಕಾರದಿಂದ ಮಂಜೂರಾಗಿರುವ ವಿಚಾರವನ್ನು ಹಾಗೂ ಸದರಿ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರು ಅವಿವಾಹಿತರಾಗಿ ಮೃತರಾಗಿರುವುದನ್ನು ಒಪ್ಪಿಕೊಂಡಿರುತ್ತಾರೆ. ಆದರೆ ಸದರಿ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರು ಚಿಕ್ಕಮಗಳೂರಿನ ಮಲ್ಲೇಗೌಡ ಆಸ್ಪತ್ರೆಯಲ್ಲಿ ದಿನಾಂಕ 25.03.1999 ರಲ್ಲಿ ಮೃತರಾಗಿದ್ದು, ವಾದಿ ಹೇಳುವಂತೆ ದಿನಾಂಕ 10.06.2000 ರಲ್ಲಿ ಸದರಿ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರು ಮೃತರಾಗಿಲ್ಲವೆಂದು ತಿಳಿಸಿರುತ್ತಾರೆ. ಅಲ್ಲದೆ ಸದರಿ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರು ವಾದಿ ಪರ ದಾವಾ ಸ್ವತ್ತನ್ನು ಮರಣ ಶಾಸನ ಬರೆದಿರುವುದನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಮುಂದುವರೆದು ಸದರಿ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರು ಅವಿವಾಹಿತರಾಗಿದ್ದು, ತನ್ನ ವೈದ್ಯಕೀಯ ಖರ್ಚುಗಳು ಮತ್ತು ಇತರೆ ಅವಶ್ಯಕತೆಗಳಿಗಾಗಿ ಸರ್ವೆ ನಂ.205/ಪಿ9(ಹಳೆ ಸರ್ವೆ ನಂ.153/ಪಿ), ಒಟ್ಟು ವಿಸ್ತೀರ್ಣ 5 ಎಕರೆ 30 ಗುಂಟೆ ಪೈಕಿ ವಿಸ್ತೀರ್ಣ 2 ಎಕರೆ 35 ಗುಂಟೆ ಸ್ವತ್ತನ್ನು 1 ನೇ ಪ್ರತಿವಾದಿಯ ತಂದೆಯಾದ ಎ.ಎಸ್.ಪಕೀರಪ್ಪ ರವರಿಗೂ ಮತ್ತು ಉಳಿಕೆ ವಿಸ್ತೀರ್ಣ 2 ಎಕರೆ 30 ಗುಂಟೆಯನ್ನು 2 ನೇ ಪ್ರತಿವಾದಿಯ ಪರ ಕ್ರಯದ ಕರಾರು

ಪತ್ರವನ್ನು ದಿನಾಂಕ 10.05.1996 ರಂದು ಜಾರಿಗೊಳಿಸಿ, ಸದರಿ ಸ್ವತ್ತಿನ ಸ್ವಾಧೀನವನ್ನು ಹಸ್ತಾಂತರಿಸಿರುತ್ತಾರೆ. ಸದರಿ ಕೃಷ್ಣನಾಯ್ಕು ಬಿನ್ ಭೀಮನಾಯ್ಕು ರವರು ಕ್ರಯದ ಕರಾರಿನಂತೆ, ಕ್ರಯಪತ್ರವನ್ನು ನೋಂದಾಯಿಸದಿದ್ದಾಗ, ಎ.ಎಸ್.ಫಕೀರಪ್ಪ ರವರು ಅಸಲು ದಾವಾ ಸಂಖ್ಯೆ:141/1997 ರಂತೆ ಹಾಗೂ 2 ನೇ ಪ್ರತಿವಾದಿಯು ಅಸಲು ದಾವಾ ಸಂಖ್ಯೆ:143/1997 ರಂತೆ ಕಡೂರಿನ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಕರಾರಿನ ನಿರ್ದಿಷ್ಟ ನೆರವೇರಿಕೆ ಕೋರಿ ದಾವೆ ಸಲ್ಲಿಸಿದ್ದು, ಸದರಿ ದಾವೆಯು ಡಿಕ್ರಿಯಾಗಿರುತ್ತದೆ. ತದನಂತರ ಸದರಿ ಸರ್ವೆ ನಂಬರ್ ದುರಸ್ಥಿಯಾಗಿ ಸರ್ವೆ ನಂ.205/ಪಿ ಎಂದು ಬದಲಾಗಿರುತ್ತದೆ. ಆದುದರಿಂದಾಗಿ ಪ್ರತಿವಾದಿಗಳು ದಾವಾ ಸ್ವತ್ತಿಗೆ ಸಂಪೂರ್ಣ ನಿರುಪಾಧಿಕ ಮಾಲೀಕರಾಗಿ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ಮುಂದುವರೆದು, ಸದರಿ ಕೃಷ್ಣನಾಯ್ಕು ಬಿನ್ ಭೀಮನಾಯ್ಕು ರವರು ತಮ್ಮ ವಯೋಸಹಜ ಖಾಯಿಲೆಯಿಂದಾಗಿ ಆರೋಗ್ಯ ಸಮಸ್ಯೆಗಳನ್ನು ಹೊಂದಿದ್ದಾಗ, ಬಿ.ಎಂ.ಕೊಪ್ಪಲು ಗ್ರಾಮದ ವಾಸಿಗಳು ಸದರಿ ಕೃಷ್ಣನಾಯ್ಕು ಬಿನ್ ಭೀಮನಾಯ್ಕು ರವರನ್ನು ಆಸ್ಪತ್ರೆಗೆ ಸೇರಿಸಲು ಸಿಂಗಟಗೆರೆ ಪೊಲೀಸರಿಗೆ ಮನವಿ ಸಲ್ಲಿಸಿರುತ್ತಾರೆ. ತದನಂತರ ಸಿಂಗಟಗೆರೆ ಪೊಲೀಸರು ಸದರಿ ಕೃಷ್ಣನಾಯ್ಕು ಬಿನ್ ಭೀಮನಾಯ್ಕು ರವರನ್ನು ಆಸ್ಪತ್ರೆಗೆ ಸೇರಿಸಿದ್ದು, ಸದರಿಯವರು ಚಿಕಿತ್ಸೆಗೆ ಸ್ಪಂದಿಸದೆ ದಿನಾಂಕ 25.03.1999 ರಂದು ಚಿಕ್ಕಮಗಳೂರಿನ ಮಲ್ಲೇಗೌಡ ಆಸ್ಪತ್ರೆಯಲ್ಲಿ ಮೃತರಾಗಿರುತ್ತಾರೆ.

KACM210028032021

ಆದುದರಿಂದಾಗಿ ಸದರಿ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರು ತಮ್ಮ ಜೀವಿತಾವಧಿಯಲ್ಲಿ ದಾವಾ ಸ್ವತ್ತಿನ ಸಂಬಂಧ ಮರಣ ಶಾಸನವನ್ನು ಬರೆದಿರುವುದಿಲ್ಲ. ಹೀಗಿರುವಾಗ ವಾದಿಯು ಪ್ರಶ್ನಿತ ಮರಣ ಶಾಸನವನ್ನು ಸೃಷ್ಟಿ ಮಾಡಿ, ದಾವಾ ಸ್ವತ್ತನ್ನು ಕಬಳಿಸಲು ಈ ಸುಳ್ಳು ದಾವೆ ಸಲ್ಲಿಸಿರುವುದರಿಂದ, ಸದರಿ ದಾವೆಯನ್ನು ಖರ್ಚು ಸಮೇತ ವಜಾಗೊಳಿಸಲು ಪ್ರಾರ್ಥಿಸಿದ್ದಾರೆ.

**4.** ವಾದಪತ್ರ, ಪ್ರತಿವಾದಿಯು ಪ್ರತಿವಾದ ಪತ್ರ ಹಾಗೂ ಉಭಯತ್ರಯರು ನ್ಯಾಯಾಲಯಕ್ಕೆ ಸಲ್ಲಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ನನ್ನ ಹಿಂದಿನ ಮಾನ್ಯ ಪೀಠಾಸೀನಾಧಿಕಾರಿಗಳು ಈ ಕೆಳಕಂಡ ವಿವಾದಾಂಶಗಳನ್ನು ರಚಿಸಿರುತ್ತಾರೆ :

## ವಿವಾದಾಂಶಗಳು

1. Whether the plaintiff proves that she is in lawful possession and enjoyment of the suit schedule property as on the date of filing of the suit?

2. Whether the plaintiff proves that the defendants caused interference with her peaceful possession of the suit property?

KACM210028032021

3. Whether the plaintiff is entitled the relief of permanent injunction?

4. What order or decree?

**5.** ವಾದಿಯ ದಾವೆಯನ್ನು ರುಜುವಾತುಪಡಿಸಲು ವಾದಿಯು ತನ್ನನ್ನು ವಾ.ಸಾ-1 (ಪಿ.ಡಬ್ಲ್ಯು-1) ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಇವರು ತನ್ನ ಮುಖ್ಯ ವಿಚಾರಣೆಯಲ್ಲಿ ಸರ್ವೆ ನಂ.205, ಸೋಮನಹಳ್ಳಿ ಗ್ರಾಮದ ಪಹಣಿಯನ್ನು ನಿಪಿ-1 ಎಂದು, ಸರ್ವೆ ನಂ.205/ಪಿ9, ಸೋಮನಹಳ್ಳಿ ಗ್ರಾಮದ ಮ್ಯುಟೇಷನ್ ಪ್ರತಿಯನ್ನು ನಿಪಿ-2 ಎಂದು, ಎಂ.ಆರ್.1/1980-81ರ ಹಕ್ಕು ಬದಲಾವಣೆ ವಹಿಯನ್ನು ನಿಪಿ-3 ನಿಶಾನೆಗಳಾಗಿ ಗುರುತಿಸಿಕೊಂಡಿದ್ದಾರೆ. 2ನೇ ಪ್ರತಿವಾದಿಯು ತನ್ನನ್ನು ಪ್ರಾ.ಸಾ-1 (ಡಿ.ಡಬ್ಲ್ಯು-1) ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಪ್ರತಿವಾದಿಯು ತನ್ನ ಸಾಕ್ಷ್ಯಕ್ಕೆ ಪೂರಕವಾಗಿ ನಿಡಿ-1 ರಿಂದ 3 ರಂತೆ ಓ.ಎಸ್.141/1997 ರ ವಾದಪತ್ರ, ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲನ್ನು, ನಿಡಿ-4 ರಿಂದ 6 ರಂತೆ ಓ.ಎಸ್.143/1997 ರ ವಾದಪತ್ರ, ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲನ್ನು, ನಿಡಿ-7 ಮತ್ತು 8 ರಂತೆ ಸೋಮನಹಳ್ಳಿ ಗ್ರಾಮದ ಸರ್ವೆ ನಂ.205/ಪಿ9 ರ ಪಹಣಿ ಹಾಗೂ 205 ರ ಪಹಣಿಯನ್ನು, ನಿಡಿ-9 ರಂತೆ

KACM210028032021

ಎಂ.ಆರ್.ಹೆಚ್–43/2019–20 ರ ಪ್ರತಿಯನ್ನು, ನಿಡಿ–10 ರಂತೆ ಎಂ.ಆರ್.ಸಂ–1/1980–81 ರ ಎಂ.ಆರ್.ನ ದೃಢೀಕೃತ ನಕಲನ್ನು, ನಿಡಿ–11 ರಂತೆ ಸಿಂಗಟಗೆರೆ ಪೊಲೀಸ್ ಠಾಣೆಯವರು ನೀಡಿರುವ ಸ್ವೀಕೃತಿಯನ್ನು, ನಿಡಿ–12 ಮತ್ತು 13 ರಂತೆ ಅರಸೀಕೆರೆಯ ಸರ್ಕಾರಿ ಆಸ್ಪತ್ರೆಯವರು ನೀಡಿರುವ ಹಣ ಸ್ವೀಕೃತಿ ಪತ್ರ ಮತ್ತು ಹೊರ ರೋಗಿ ವಿಭಾಗ ಕೊಠಡಿ ಸಂಖ್ಯೆ ರಶೀದಿಯನ್ನು, ನಿಡಿ–14 ರಂತೆ ದಾವಾ ಆಸ್ತಿಯನ್ನು ನನಗೆ ಒಪ್ಪಂದ ಕರಾರು ಪತ್ರ ಮಾಡಿಕೊಟ್ಟ ಕೃಷ್ಣನಾಯ್ಕ ರವರು ದಿನಾಂಕ 25.03.1999 ರಂದು ಮೃತಪಟ್ಟಿರುವ ಬಾಬ್ತು ಮರಣ ಪತ್ರವನ್ನು, ನಿಡಿ–15 ರಂತೆ ಕೃಷ್ಣನಾಯ್ಕ ರವರು ದಿನಾಂಕ 10.06.2000 ರಲ್ಲಿ ಮೃತಪಟ್ಟಿರುತ್ತಾರೆ ಎಂದು ವಾದಿಯವರು ಸಂಕೀರ್ಣ ಪ್ರಕರಣ ದಾಖಲು ಮಾಡಿ ಪಡೆದ ಮರಣ ಪತ್ರದ ಪ್ರತಿಯನ್ನು, ನಿಡಿ–16 ರಂತೆ ಮುಕ್ತಿಧಾಮ ಚಿತಾಗಾರದಲ್ಲಿ ಹಣ ಪಾವತಿ ಮಾಡಿದ ಬಾಬ್ತು ರಶೀದಿಯನ್ನು, ನಿಡಿ–17 ರಂತೆ ದಿನಾಂಕ 17.03.1999 ರಂತೆ ಕೃಷ್ಣನಾಯ್ಕ ರವರು ಚಿಕ್ಕಮಗಳೂರಿನ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದು ವೈದ್ಯರು ನೀಡಿದ ಪ್ರಮಾಣ ಪತ್ರವನ್ನು, ನಿಡಿ–18 ರಂತೆ ನಮೂನೆ–3 ರ ದೃಢೀಕೃತ ನಕಲನ್ನು, ನಿಪಿ–19 ರಂತೆ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ನಾನು ದಾಖಲೆಗಳ ದೃಢೀಕೃತ ನಕಲನ್ನು ಮತ್ತು ನಿಡಿ–20 ರಿಂದ 22 ರಂತೆ ತರೀಕೆರೆ ಉಪ–ವಿಭಾಗಾಧಿಕಾರಿಗಳ ನ್ಯಾಯಾಲಯದ

KACM210028032021

ಆರ್.ಎ.ನಂ.166/2025 ರ ಆದೇಶದ ಪುಟದ ದೃಢೀಕೃತ ನಕಲನ್ನು, ನೋಟೀಸಿನ ದೃಢೀಕೃತ ನಕಲನ್ನು, ಮೇಲ್ಮನವಿಯ ಅರ್ಜಿಯ ದೃಢೀಕೃತ ನಕಲನ್ನು ಕ್ರಮವಾಗಿ ಗುರುತಿಸಿಕೊಂಡಿರುತ್ತಾರೆ.

**6.** ವಾದಿ ಪರ ವಾದವನ್ನು ಆಲಿಸಲಾಯಿತು. ನಂತರ ನ್ಯಾಯಾಲಯದಲ್ಲಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಮೇಲಿನ ವಿವಾದಾಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

| | | |
|---|---|---|
| ವಿವಾದಾಂಶ –1 | – | ನಕಾರಾತ್ಮಕವಾಗಿ |
| ವಿವಾದಾಂಶ –2 | – | ನಕಾರಾತ್ಮಕವಾಗಿ |
| ವಿವಾದಾಂಶ –3 | – | ನಕಾರಾತ್ಮಕವಾಗಿ |
| ವಿವಾದಾಂಶ –4 | – | ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ |

:: **ಕಾರಣಗಳು** ::

**7.** **ವಿವಾದಾಂಶ–1** :: ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ಸಿಂಗಟಗೆರೆ ಹೋಬಳಿ, ಸೋಮನಹಳ್ಳಿ ಗ್ರಾಮದ ಸರ್ವೆ ನಂ.205, ವಿಸ್ತೀರ್ಣ 5 ಎಕರೆ ದಾವಾ ಸ್ವತ್ತು ಮೂಲತಃ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರಿಗೆ ಸಾಗುವಳಿ ಚೀಟಿ ಸಂಖ್ಯೆ:4/1980–81/ಜಿ.ಡಿ.ಆರ್.59/70–71 ರಂತೆ ದಿನಾಂಕ 30.06.1981 ರಂದು

ಕಡೂರಿನ ತಹಶೀಲ್ದಾರ್ ರವರು ಕೆಲವೊಂದು ಷರತ್ತುಗಳೊಂದಿಗೆ ಸರ್ಕಾರದಿಂದ ಉಚಿತವಾಗಿ ಮಂಜೂರು ಮಾಡಿರುತ್ತಾರೆ. ನಂತರ ಮ್ಯೂಟೇಶನ್ ಸಂಖ್ಯೆ:1/1980-81 ರಂತೆ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರ ಹೆಸರಿನಲ್ಲಿ ಖಾತೆ ಬದಲಾವಣೆಯಾಗಿದ್ದು, ಸದರಿ ಸ್ವತ್ತಿನಲ್ಲಿ ಕೃಷ್ಣನಾಯ್ಕ ರವರು ಸ್ವಾಧೀನಾನುಭವವನ್ನು ಹೊಂದಿರುತ್ತಾರೆ ಹಾಗೂ ಕೃಷ್ಣ ನಾಯ್ಕ ರವರು ಅವಿವಾಹಿತರಾಗಿ ಮೃತರಾಗಿರುತ್ತಾರೆ ಎಂಬ ವಾದ ಪತ್ರದ ಸಂಗತಿಗಳನ್ನು ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಒಪ್ಪಿಕೊಂಡಿರುತ್ತಾರೆ.

**7.1** ಸದರಿ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರು ತನ್ನ ಸ್ವಂತ ಅಕ್ಕನ ಮಗಳಾಗಿರುವ ವಾದಿಗೆ ತನ್ನನ್ನು ಪ್ರೀತಿ, ವಾತ್ಸಲ್ಯದಿಂದ ಹಾಗೂ ತನ್ನ ಯೋಗಕ್ಷೇಮವನ್ನು ನೋಡಿಕೊಂಡು ಬಂದಿರುವ ಕಾರಣ ವಾದಿಯ ಪರವಾಗಿ ದಾವಾ ಸ್ವತ್ತನ್ನು ದಿನಾಂಕ 15.02.1999 ರಲ್ಲಿ ಮರಣಶಾಸನ ಮಾಡಿದ್ದು, ಸದರಿ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರು ಮೃತರಾದ ನಂತರ ಮರಣಶಾಸನದಂತೆ, ದಾವಾ ಸ್ವತ್ತಿನ ಖಾತೆಯು ವಾದಿಯ ಹೆಸರಿಗೆ ಬದಲಾಗಿ, ವಾದಿಯು ಸದರಿ ಸ್ವತ್ತಿನಲ್ಲಿ ನಿರುಪಾಧಿಕ ಮಾಲೀಕರಾಗಿ ಸ್ವಾಧೀನಾನುಭವವನ್ನು ಹೊಂದಿದ್ದಾರೆ ಎಂಬುವುದು ವಾದ ಪತ್ರದ ಪ್ರಮುಖ ಸಂಗತಿಯಾಗಿದೆ.

KACM210028032021

**7.2** ಸದರಿ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರು ತಮ್ಮ ವಯೋಸಹಜ ಖಾಯಿಲೆಯಿಂದಾಗಿ ಆರೋಗ್ಯ ಸಮಸ್ಯೆಗಳನ್ನು ಹೊಂದಿದ್ದಾಗ, ಬಿ.ಎಂ.ಕೊಪ್ಪಲು ಗ್ರಾಮದ ವಾಸಿಗಳು ಸದರಿ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರನ್ನು ಆಸ್ಪತ್ರೆಗೆ ಸೇರಿಸಲು ಸಿಂಗಟಗೆರೆ ಪೊಲೀಸರಿಗೆ ಮನವಿ ಸಲ್ಲಿಸಿರುತ್ತಾರೆ. ತದನಂತರ ಸಿಂಗಟಗೆರೆ ಪೊಲೀಸರು ಸದರಿ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರನ್ನು ಆಸ್ಪತ್ರೆಗೆ ಸೇರಿಸಿದ್ದು, ಸದರಿಯವರು ಚಿಕಿತ್ಸೆಗೆ ಸ್ಪಂದಿಸದೆ ದಿನಾಂಕ 25.03.1999 ರಂದು ಚಿಕ್ಕಮಗಳೂರಿನ ಮಲ್ಲೇಗೌಡ ಆಸ್ಪತ್ರೆಯಲ್ಲಿ ಮೃತರಾಗಿರುತ್ತಾರೆ ಎಂಬುವುದು ಪ್ರತಿವಾದಿಯ ಪ್ರತಿವಾದ ಪತ್ರದ ಪ್ರಮುಖ ನಿಲುವಾಗಿದೆ.

**7.3** ದಿನಾಂಕ 24.08.2023 ರಂದು ಪ್ರತಿವಾದಿ ಪರ ವಕೀಲರು ವಾದಿ/ ಪಿ.ಡಬ್ಲ್ಯೂ–1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ಈ ರೀತಿ ನುಡಿದಿರುತ್ತಾರೆ.

> **"ಕೃಷ್ಣನಾಯ್ಕ ಎಂಬುವರು ಸೋಮನಹಳ್ಳಿ ತಾಂಡ್ಯದವರು ಎಂದರೆ ಸರಿ. ಸದರಿ ಕೃಷ್ಣನಾಯ್ಕ ರವರಿಗೆ ಮದುವೆಯಾಗಿರಲಿಲ್ಲ ಎಂದರೆ ಸರಿ. ಅವರ ತಂದೆ – ತಾಯಿ ತೀರಿ ಹೋಗಿದ್ದರು ಎಂದರೆ ಸರಿ. ಹಾಗಾಗಿ ಅವರು ಬಿ.ಜಿ.ಮಲ್ಲಪ್ಪ ರವರ ಮನೆಯಲ್ಲಿ ಕೂಲಿ ಕೆಲಸ ಮಾಡಿಕೊಂಡು ಇದ್ದರು ಎಂದರೆ ಸರಿ."**

ಸಾಕ್ಷಿಯ ಈ ಒಂದು ಹೇಳಿಕೆಯನ್ನು ಪರಾಮರ್ಶಿಸಿದಾಗ, ಸದರಿ ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರು ತನ್ನ ಜೀವಿತಾವಧಿಯಲ್ಲಿ ವಾದಿಯ ಆರೈಕೆಯಲ್ಲಿ ಇರಲಿಲ್ಲ, ಬದಲಾಗಿ ಬಿ.ಜಿ.ಮಲ್ಲಪ್ಪ ರವರ ಮನೆಯಲ್ಲಿ ಕೂಲಿ ಕೆಲಸ ಮಾಡಿಕೊಂಡು ಸ್ವಾವಲಂಬಿಯಾಗಿ ಜೀವನ ಮಾಡುತ್ತಿದ್ದರು ಎಂಬುವುದು ಕಂಡು ಬರುತ್ತದೆ.

7.4 ಮುಂದುವರೆದು, ವಾದಿ/ಪಿ.ಡಬ್ಲ್ಯೂ-1 ರವರು ಈ ರೀತಿ ನುಡಿದಿರುತ್ತಾರೆ.

> **"...... ಅವರು ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿ ದಿನಾಂಕ 25.03.1999 ರಂದು ನಿಧಿನ ಹೊಂದಿರುತ್ತಾರೆ ಎಂದರೆ ಸರಿ. ಅವರಿಗೆ 1999 ರಿಂದ ಟಿಬಿ ಖಾಯಿಲೆ ಇತ್ತು ಎಂದರೆ ಸರಿ. ಅವರು ಅರಸೀಕೆರೆ, ಸಿಂಗಟಗೆರೆ ಮತ್ತು ಚಿಕ್ಕಮಗಳೂರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿ. ಬಿ.ಜಿ.ಮಲ್ಲಪ್ಪ ಮತ್ತು ಗ್ರಾಮಸ್ಥರು ಕೃಷ್ಣನಾಯ್ಕ ರವರಿಗೆ ಟಿಬಿ ಖಾಯಿಲೆ ಇದ್ದು, ಅವರಿಗೆ ನೋಡಿಕೊಳ್ಳುವವರು ಯಾರು ಇರುವುದಿಲ್ಲ ಅವರಿಗೆ ಚಿಕಿತ್ಸೆ ಕೊಡಿಸಿ ಎಂದು ಸಿಂಗಟಗೆರೆ ಪೊಲೀಸ್ ಠಾಣೆಗೆ ದಿನಾಂಕ 17.03.1999 ರಂದು ದೂರು ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. "**

ವಾದಿ/ಸಾಕ್ಷಿಯ ಈ ಮೇಲಿನ ಹೇಳಿಕೆಯನ್ನು ಪರಿಶೀಲಿಸಿದಾಗ, ಕೃಷ್ಣನಾಯ್ಕು ರವರು ದಿನಾಂಕ 25.03.1999 ರಲ್ಲಿ ಚಿಕ್ಕಮಗಳೂರಿನ ಮಲ್ಲೇಗೌಡ ಆಸ್ಪತ್ರೆಯಲ್ಲಿ ಮೃತರಾಗಿದ್ದರೂ ಸಹ ವಾದಿಯು ಸದರಿ ಕೃಷ್ಣನಾಯ್ಕು ರವರು ದಿನಾಂಕ 10.06.2000 ರಲ್ಲಿ ಊರಿನಲ್ಲಿ ಮೃತರಾಗಿದ್ದಾರೆಂದು ಮಾನ್ಯ ಕಡೂರಿನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರಲ್ಲಿ ಸಂಕೀರ್ಣ ಅರ್ಜಿ ಸಂಖ್ಯೆ:64/2019 ರಂತೆ ಅರ್ಜಿ ಸಲ್ಲಿಸಿ, ಸದರಿ ಅರ್ಜಿಯಲ್ಲಿನ ಮಾನ್ಯ ನ್ಯಾಯಾಲಯದ ಆದೇಶದನುಸಾರ ಸದರಿ ಕೃಷ್ಣನಾಯ್ಕು ರವರು ದಿನಾಂಕ 10.06.2000 ರಲ್ಲಿ ಮೃತರಾಗಿದ್ದಾರೆಂದು ನಿಡಿ-15 ರಂತೆ ಒಂದು ಸುಳ್ಳು ಮರಣ ಪ್ರಮಾಣ ಪತ್ರವನ್ನು ಕೃಷ್ಣನಾಯ್ಕು ರವರಿಗೆ ಸಂಬಂಧಿಸಿದಂತೆ ಪಡೆದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅಲ್ಲದೆ ನಿಡಿ-14 ಕೃಷ್ಣನಾಯ್ಕು ರವರ ಮರಣ ಪ್ರಮಾಣ ಪತ್ರವಾಗಿದ್ದು, ಸದರಿ ದಾಖಲೆಯಂತೆ ಕೃಷ್ಣನಾಯ್ಕು ರವರು ದಿನಾಂಕ 25.03.1999 ರಂದು ಚಿಕ್ಕಮಗಳೂರಿನ ಸರ್ಕಾರಿ ಮಲ್ಲೇಗೌಡ ಆಸ್ಪತ್ರೆಯಲ್ಲಿ ಮೃತವಾಗಿರುವುದು ದೃಢವಾಗುತ್ತದೆ. ಅಲ್ಲದೆ ಸದರಿ ಕೃಷ್ಣನಾಯ್ಕು ರವರನ್ನು ಚಿಕಿತ್ಸೆಗೆಂದು ಆಸ್ಪತ್ರೆಗೆ ದಾಖಲಿಸಲು ಬಿ.ಎಂ.ಕೊಪ್ಪಲು ಗ್ರಾಮಸ್ಥರು ಮತ್ತು ಬಿ.ಜಿ.ಮಲ್ಲಪ್ಪ ರವರು ದಿನಾಂಕ 17.03.1999 ರಂದು ಸಿಂಗಟಗೆರೆ ಪೊಲೀಸ್ ಠಾಣಾಧಿಕಾರಿಯವರಿಗೆ ಮನವಿ ಸಲ್ಲಿಸಿದ ಸಂಬಂಧ ನಿಡಿ-11 ರಂತೆ ಸದರಿ ಪೊಲೀಸರು ನೀಡಿದ ಸ್ವೀಕೃತಿಯನ್ನು ಡಬ್ಲ್ಯೂ-1 ರವರು ನ್ಯಾಯಾಲಯಕ್ಕೆ

ಹಾಜರುಪಡಿಸಿರುತ್ತಾರೆ. ಸದರಿ ನಿಡಿ-11 ರ ಅಂಶಗಳನ್ನು ವಾದಿ ಪರ ಅಲ್ಲಗಳೆದಿರುವುದಿಲ್ಲ. ಆದುದರಿಂದಾಗಿ ಸದರಿ ಕೃಷ್ಣನಾಯ್ಕು ರವರು ತನ್ನ ಜೀವಿತಾವಧಿಯಲ್ಲಿ ವಾದಿಯ ಆಶ್ರಯದಲ್ಲಿ ಇರಲಿಲ್ಲ ಮತ್ತು ಖಾಯಿಲೆಯಿಂದ ಬಳಲುತ್ತಿದ್ದಾಗ, ಸಿಂಗಟಗೆರೆ ಪೊಲೀಸರು ಸದರಿಯವರನ್ನು ಚಿಕ್ಕಮಗಳೂರಿನ ಮಲ್ಲೇಗೌಡ ಆಸ್ಪತ್ರೆಗೆ ಚಿಕಿತ್ಸೆಗೆಂದು ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗಿದೆ ಸದರಿ ರವರು ಮಲ್ಲೇಗೌಡ ಸರ್ಕಾರಿ ಆಸ್ಪತ್ರೆಯಲ್ಲಿ ಮೃತರಾದರು ಎಂಬುವುದು ದೃಢವಾಗುತ್ತದೆ.

**8.** ಕೃಷ್ಣನಾಯ್ಕು ರವರು ತನ್ನ ಜೀವಿತಾವಧಿಯಲ್ಲಿ ವಾದಿಯ ಪರವಾಗಿ ದಿನಾಂಕ 15.02.1999 ರಂದು ಮರಣಶಾಸನ ಬರೆದಿದ್ದರು ಮತ್ತು ಸದರಿ ಮರಣಶಾಸನದನುಸಾರ ತನ್ನ ಹೆಸರಿಗೆ ಖಾತೆ ಬದಲಾವಣೆಯಾಗಿದೆ ಎಂಬುವುದು ವಾದಿಯ ವಾದ ಪತ್ರದ ಪ್ರಮುಖ ಸಂಗತಿಯಾಗಿದೆ. ವಾದಿಯು ಸದರಿ ಪ್ರಶ್ನಿತ ದಿನಾಂಕ 15.02.1999 ರ ಮರಣಶಾಸನ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವಾದಿ/ಪಿ.ಡಬ್ಲ್ಯೂ-1 ರವರು ನಿಪಿ-1 ರಂತೆ ದಾವಾ ಸರ್ವೆ ನಂ.205 ರ 2020-21 ರ ಗಣಕೀಕೃತ ಪಹಣಿ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ಪಹಣಿಯ ಕಾಲಂ 10 ರಲ್ಲಿ "ಎಂ.ಆರ್.ಹೆಚ್-43/2019-20 ಒಟ್ಟುಗೂಡಿಸು" ಎಂದು ನಮೂದಾಗಿರುತ್ತದೆ. ಆದರೆ ಸದರಿ ಪ್ರಶ್ನಿತ

ದಿನಾಂಕ 15.02.1999 ರ ಮರಣಶಾಸನದನುಸಾರ ವಾದಿಯ ಹೆಸರಿಗೆ ಖಾತೆ ಬದಲಾವಣೆಯಾಗಿರುವುದಿಲ್ಲ. ವಾದ ಪತ್ರದ ಅಂಶಗಳನ್ನು ಪರಿಗಣಿಸಿದಾಗ, ಕೃಷ್ಣನಾಯ್ಕ ರವರು ಮೃತರಾದ ನಂತರ ಮರಣಶಾಸನದಂತೆ ದಾವಾ ಸ್ವತ್ತಿನ ಖಾತೆಯು ವಾದಿಯ ಹೆಸರಿಗೆ ಬದಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ವಾದ ಪತ್ರದಲ್ಲಿರುವಂತೆ ಕೃಷ್ಣನಾಯ್ಕ ರವರು ದಿನಾಂಕ 10.06.2000 ರ ಇಸವಿಯಲ್ಲಿ ಮೃತರಾಗಿರುತ್ತಾರೆ. ಆದರೆ ಸದರಿ ದಿನಾಂಕ 10.06.2000 ರಂದು ಅಥವಾ ಆ ನಂತರ ಕೆಲವೆ ವರ್ಷಗಳಲ್ಲಿ ವಾದಿ ಹೆಸರಿಗೆ ದಾವಾ ಸ್ವತ್ತಿನ ಖಾತೆಯು ಬದಲಾಗಿರುವುದಿಲ್ಲ.

**8.1** ದಿನಾಂಕ 11.11.2024 ರಂದು ಪ್ರತಿವಾದಿ ಪರ ವಕೀಲರು ವಾದಿ/ ಪಿ.ಡಬ್ಲ್ಯೂ-1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ಈ ರೀತಿ ನುಡಿದಿರುತ್ತಾರೆ.

> **"ಖಾತೆ ಮಾಡಿಸಲು ನನಗೆ ಸುಮಾರು 2 ಲಕ್ಷ ಖರ್ಚಾಗಿರುತ್ತದೆ. ಸದರಿ 2 ಲಕ್ಷ ಹಣವನ್ನು ಯಾರು ಯಾರಿಗೆ ನೀಡಿರುತ್ತೀರಿ ಎಂದರೆ ನನಗೆ ಗೊತ್ತಿಲ್ಲ."**

ಸಾಕ್ಷಿಯ ಈ ಮೇಲಿನ ಹೇಳಿಕೆಯನ್ನು ಪರಿಗಣಿಸಿದಾಗ, ನಿಪಿ-1 ರಂತೆ ಗಣಕೀಕೃತ ಪಹಣಿಯಲ್ಲಿ ತನ್ನ ಹೆಸರನ್ನು ನೋಂದಾಯಿಸಿಕೊಳ್ಳಲು ವಾದಿಯು ಸುಮಾರು 2 ಲಕ್ಷ ಹಣ ಖರ್ಚು ಮಾಡಿರುವುದು ವಾದಿಯ ಹೇಳಿಕೆಯಿಂದಲೆ ಸ್ಪಷ್ಟವಾಗುತ್ತದೆ. ನಿಪಿ-1 ರ

ಪಹಣಿಯು ಯಾವುದೇ ಮರಣಶಾಸನದನುಸಾರ ವಾದಿಯ ಹೆಸರಿಗೆ ಬದಲಾಗಿರುವುದಿಲ್ಲ. ಆದುದರಿಂದಾಗಿ ಎಳ್ಳಷ್ಟು ಸಂಶಯವಿಲ್ಲದೆ ವಾದಿಯು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ದಾವಾ ಸ್ವತ್ತನ್ನು ತನ್ನ ಹೆಸರಿಗೆ ವಿಧಿ ವಿರುದ್ಧವಾಗಿ ಬದಲಾಯಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಅಲ್ಲದೆ ವಾದಿಯು ಯಾವುದೇ ಮರಣಶಾಸನದ ಆಧಾರವಿಲ್ಲದೆ ನಿಪಿ-1 ರಂತೆ ಗಣಕೀಕೃತ ಪಹಣಿಯಲ್ಲಿ ತನ್ನ ಹೆಸರನ್ನು ಅಕ್ರಮವಾಗಿ ಹೊಂದಿದ್ದಾರೆ ಎಂದು ಪ್ರತಿವಾದಿಯು ಪ್ರತಿವಾದ ಪತ್ರದಲ್ಲಿ ಪ್ರಮುಖ ನಿಲುವು ಪಡೆದಿದ್ದರೂ ಸಹ ವಾದಿಯು ತಾನು ಪ್ರಶ್ನಿತ ದಿನಾಂಕ 15.02.1999 ರ ಮರಣಶಾಸನದನುಸಾರ ದಾವಾ ಸ್ವತ್ತಿಗೆ ನಿರುಪಾಧಿಕ ಮಾಲೀಕನಾಗಿರುವೆ ಎಂದು ಹಕ್ಕಿನ ಘೋಷಣಾತ್ಮಕ ಪರಿಹಾರ ಕೋರಲು ವಾದಿಯು ಬದ್ಧರಾಗಿದ್ದರೂ ಸಹ ಸದರಿ ದಾವೆಯನ್ನು ಕೇವಲ ಪ್ರತಿಬಂಧಕಾಜ್ಞೆ ಪರಿಹಾರಕ್ಕೆ ಸೀಮಿತಗೊಳಿಸಿಕೊಂಡಿರುತ್ತಾರೆ.

**9.** ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರು ಅವಿವಾಹಿತರಾಗಿದ್ದು, ತನ್ನ ವೈದ್ಯಕೀಯ ಖರ್ಚುಗಳು ಮತ್ತು ಇತರೆ ಅವಶ್ಯಕತೆಗಳಿಗಾಗಿ ಸರ್ವೆ ನಂ.205/ಪಿ9(ಹಳೆ ಸರ್ವೆ ನಂ.153/ಪಿ), ಒಟ್ಟು ವಿಸ್ತೀರ್ಣ 5 ಎಕರೆ 30 ಗುಂಟೆ ಪೈಕಿ ವಿಸ್ತೀರ್ಣ 2 ಎಕರೆ 35 ಗುಂಟೆ ಸ್ವತ್ತನ್ನು 1 ನೇ ಪ್ರತಿವಾದಿಯ ತಂದೆಯಾದ ಎ.ಎಸ್.ಪಕೀರಪ್ಪ ರವರಿಗೂ ಮತ್ತು

KACM210028032021

ಉಳಿಕೆ ವಿಸ್ತೀರ್ಣ 2 ಎಕರೆ 30 ಗುಂಟೆಯನ್ನು 2 ನೇ ಪ್ರತಿವಾದಿಯ ಪರ ಕ್ರಯದ ಕರಾರು ಪತ್ರವನ್ನು ದಿನಾಂಕ 10.05.1996 ರಂದು ಜಾರಿಗೊಳಿಸಿ, ಸದರಿ ಸ್ವತ್ತಿನ ಸ್ವಾಧೀನವನ್ನು ಹಸ್ತಾಂತರಿಸಿರುತ್ತಾರೆ. ಸದರಿ ಕೃಷ್ಣನಾಯ್ಕು ಬಿನ್ ಭೀಮನಾಯ್ಕು ರವರು ಕ್ರಯದ ಕರಾರಿನಂತೆ, ಕ್ರಯಪತ್ರವನ್ನು ನೋಂದಾಯಿಸದಿದ್ದಾಗ, ಎ.ಎಸ್.ಪಕೀರಪ್ಪ ರವರು ಅಸಲು ದಾವಾ ಸಂಖ್ಯೆ:141/1997 ರಂತೆ ಹಾಗೂ 2 ನೇ ಪ್ರತಿವಾದಿಯು ಅಸಲು ದಾವಾ ಸಂಖ್ಯೆ:143/1997 ರಂತೆ ಕಡೂರಿನ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಕರಾರಿನ ನಿರ್ದಿಷ್ಟ ನೆರವೇರಿಕೆ ಕೋರಿ ದಾವೆ ಸಲ್ಲಿಸಿದ್ದು, ಸದರಿ ದಾವೆಯು ಡಿಕ್ರಿಯಾಗಿರುತ್ತದೆ ಎಂಬುವುದು ಪ್ರತಿವಾದಿಗಳ ಪ್ರಮುಖ ಪ್ರತಿರಕ್ಷೆಯಾಗಿದೆ.

**9.1** ದಿನಾಂಕ 11.11.2024 ರಂದು ಪ್ರತಿವಾದಿ ಪರ ವಕೀಲರು ವಾದಿ/ ಪಿ.ಡಬ್ಲ್ಯೂ-1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ಈ ರೀತಿ ನುಡಿದಿರುತ್ತಾರೆ.

> **"ಸದರಿ ಕೃಷ್ಣನಾಯ್ಕು ರವರು ತೆಂಗು ಕುರುಬರ ಹಟ್ಟಿಯ ಹತ್ತಿರ ದಿನಾಂಕ 10.05.1999 ನೇ ಇಸವಿಯಲ್ಲಿ 1 ನೇ ಪ್ರತಿವಾದಿಯ ತಂದೆ ಫಕೀರಪ್ಪ ಮತ್ತು 2 ನೇ ಪ್ರತಿವಾದಿಗೆ ತಲಾ 2 ಎಕರೆ 35 ಗುಂಟೆಯಂತೆ ಕ್ರಯ ಕರಾರು ಪತ್ರ ಮಾಡಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕರಾರು ಪತ್ರವು ಒಟ್ಟು ರೂ.25,000/- ಪ್ರತಿಫಲಕ್ಕೆ ಮಾಡಿದ್ದು**

**ಅದರಲ್ಲಿ ಮುಂಗಡವಾಗಿ ಕೃಷ್ಣನಾಯ್ಕ ರವರು ರೂ.20,000/- ನಗದು ಹಣವನ್ನು ಪಡೆದುಕೊಂಡು ಜಾಗದ ಸ್ವಾಧೀನವನ್ನು 1 ನೇ ಪ್ರತಿವಾದಿಯ ತಂದೆ ಮತ್ತು 2 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ."**

ವಾದಿ/ಪಿ.ಡಬ್ಲ್ಯೂ-1 ರವರ ಮೇಲಿನ ಹೇಳಿಕೆಯನ್ನು ಪರಿಶೀಲಿಸಿದಾಗ, ಕೃಷ್ಣನಾಯ್ಕ ರವರು ದಾವಾ ಸ್ವತ್ತನ್ನು ದಿನಾಂಕ 10.05.1999 ರಲ್ಲಿ 1 ನೇ ಪ್ರತಿವಾದಿಯ ತಂದೆ ಪಕೀರಪ್ಪ ಮತ್ತು 2 ನೇ ಪ್ರತಿವಾದಿಗೆ ಕ್ರಮವಾಗಿ ತಲಾ 2 ಎಕರೆ 35 ಗುಂಟೆಯಂತೆ ಕ್ರಯದ ಕರಾರು ಪತ್ರ ಮಾಡಿರುವುದನ್ನು ವಾದಿಯು ತಳ್ಳಿಹಾಕಿರುವುದಿಲ್ಲ, ಬದಲಾಗಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಆದರೂ ಸಹ ಸದರಿ ದಿನಾಂಕದಂದು ಕೃಷ್ಣನಾಯ್ಕ ರವರು 1 ನೇ ಪ್ರತಿವಾದಿಯ ತಂದೆ ಪಕೀರಪ್ಪ ಮತ್ತು 2 ನೇ ಪ್ರತಿವಾದಿಗೆ ಕ್ರಮವಾಗಿ ತಲಾ 2 ಎಕರೆ 35 ಗುಂಟೆಯಂತೆ ದಾವಾ ಸ್ವತ್ತಿನ ಸಂಬಂಧ ಕ್ರಯದ ಕರಾರು ಪತ್ರ ಮಾಡಿದ್ದಾರೆ ಎಂಬುವುದನ್ನು ಪ್ರತಿವಾದಿಯು ರುಜುವಾತುಪಡಿಸಬೇಕಾಗುತ್ತದೆ.

**9.2** ಎರಡನೇ ಪ್ರತಿವಾದಿ / ಡಿಬ್ಲ್ಯೂ-2 ರವರು ನಿಡಿ-2 ಮತ್ತು 3 ರಂತೆ ಅಸಲು ದಾವಾ ಸಂಖ್ಯೆ: 141/1997 ರ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ಪ್ರತಿಗಳನ್ನು ಹಾಗೂ ನಿಡಿ-5 ಮತ್ತು 6 ರಂತೆ ಅಸಲು ದಾವಾ ಸಂಖ್ಯೆ: 143/1997 ರ ತೀರ್ಪು ಮತ್ತು ಡಿಕ್ರಿಯ

ದೃಢೀಕೃತ ಪ್ರತಿಗಳನ್ನು ನಿಶಾನೆಗೊಳಿಸಿಕೊಂಡಿರುತ್ತಾರೆ. ಸದರಿ ತೀರ್ಪಿನ ಅಂಶಗಳನ್ನು ಪರಾಮರ್ಶಿಸಿದಾಗ, ಸರ್ವೆ ನಂ.153/ಪಿ, ಒಟ್ಟು ವಿಸ್ತೀರ್ಣ 5 ಎಕರೆ 30 ಗುಂಟೆ ಪೈಕಿ ವಿಸ್ತೀರ್ಣ 2 ಎಕರೆ 35 ಗುಂಟೆ ಸ್ವತ್ತನ್ನು 1 ನೇ ಪ್ರತಿವಾದಿಯ ತಂದೆಯಾದ ಎ.ಎಸ್.ಪಕೀರಪ್ಪ ರವರಿಗೂ ಮತ್ತು ಉಳಿಕೆ ವಿಸ್ತೀರ್ಣ 2 ಎಕರೆ 30 ಗುಂಟೆಯನ್ನು 2 ನೇ ಪ್ರತಿವಾದಿಯ ಪರ ಕ್ರಯದ ಕರಾರು ಪತ್ರವನ್ನು ದಿನಾಂಕ 10.05.1996 ರಂದು ಜಾರಿಗೊಳಿಸಿ, ಸದರಿ ಸ್ವತ್ತಿನ ಸ್ವಾಧೀನವನ್ನು ಹಸ್ತಾಂತರಿಸಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಆದುದರಿಂದಾಗಿ ದಾವಾ ಸ್ವತ್ತಿನಲ್ಲಿ 1 ನೇ ಪ್ರತಿವಾದಿಯ ತಂದೆಯಾದ ಎ.ಎಸ್.ಪಕೀರಪ್ಪ ರವರು ಮತ್ತು 2 ನೇ ಪ್ರತಿವಾದಿಯು ದಿನಾಂಕ 10.05.1996 ರಲ್ಲಿಯೇ ಸ್ವಾಧೀನಾನುಭವ ಹೊಂದಿರುವುದು ಯಾವುದೇ ಸಂಶಯವಿಲ್ಲದೆ ಸ್ಪಷ್ಟವಾಗಿರುತ್ತದೆ.

**9.3** ವಾದಿ ಪರ ವಕೀಲರು ದಿನಾಂಕ 16.06.2026 ರಂದು ಡಿಬ್ಲ್ಯೂ-1 / 2 ನೇ ಪ್ರತಿವಾದಿಯನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ಈ ರೀತಿ ನುಡಿದಿರುತ್ತಾರೆ.

> **"..... ನಾನು ಕೃಷ್ಣನಾಯ್ಕು ಎನ್ನುವವರ ಮೇಲೆ ನಿರ್ದಿಷ್ಟ ನೆರವೇರಿಕೆ ಕೋರಿ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆ ನನ್ನ ಪರ ಡಿಕ್ರಿಯಾಗಿದೆ ಎಂದರೆ ಸರಿ. ಸದರಿ ಡಿಕ್ರಿಯ**

**ದಿನಾಂಕದಿಂದ 6 ತಿಂಗಳ ಒಳಗಾಗಿ ದಾವಾ ಸ್ವತ್ತನ್ನು ನೋಂದಾಯಿಸಿಕೊಳ್ಳಬೇಕೆಂದು ಆದೇಶಿಸಿತ್ತು ಎಂದರೆ ಸರಿ."**

ವಾದಿ ಪರ ವಕೀಲರ ಈ ಮೇಲಿನ ಸೂಚನೆಗಳನ್ನು ಪರಾಮರ್ಶಿಸಿದಾಗ, ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರು ದಿನಾಂಕ 10.05.1996 ರಲ್ಲಿ ದಾವಾ ಸರ್ವೆ ನಂ.205/ಪಿ9(ಹಳೆ ಸರ್ವೆ ನಂ.153/ಪಿ) ಒಟ್ಟು ವಿಸ್ತೀರ್ಣ 5 ಎಕರೆ 35 ಗುಂಟೆ ಪೈಕಿ ವಿಸ್ತೀರ್ಣ 2 ಎಕರೆ 35 ಗುಂಟೆ ಸ್ವತ್ತನ್ನು 1 ನೇ ಪ್ರತಿವಾದಿಯ ತಂದೆಯ ಪರವಾಗಿಯು ಹಾಗೂ ಉಳಿಕೆ 2 ಎಕರೆ 35 ಗುಂಟೆ ಸ್ವತ್ತನ್ನು 2 ನೇ ಪ್ರತಿವಾದಿಯ ಪರವಾಗಿಯು ಕ್ರಯದ ಕರಾರಿನ ಮೂಲಕ ಹಸ್ತಾಂತರಿಸಿದ್ದರು ಎಂಬುವುದು ಸ್ಪಷ್ಟವಾಗುತ್ತದೆ. ಅಲ್ಲದೆ ಸದರಿ ಕೃಷ್ಣಪ್ಪ ರವರು ಕ್ರಯದ ಕರಾರಿನಂತೆ, ಕ್ರಯಪತ್ರವನ್ನು ನೋಂದಾಯಿಸದಿದ್ದಾಗ, ಎ.ಎಸ್.ಪಕೀರಪ್ಪ ರವರು ಅಸಲು ದಾವಾ ಸಂಖ್ಯೆ141/1997 ರಂತೆ ಹಾಗೂ 2 ನೇ ಪ್ರತಿವಾದಿಯು ಅಸಲು ದಾವಾ ಸಂಖ್ಯೆ143/1997 ರಂತೆ ಕಡೂರಿನ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಕರಾರಿನ ನಿರ್ದಿಷ್ಟ ನೆರವೇರಿಕೆ ಕೋರಿ ದಾವೆ ಸಲ್ಲಿಸಿದ್ದು, ಸದರಿ ದಾವೆಯು ಡಿಕ್ರಿಯಾಗಿರುತ್ತದೆ ಎಂಬುವುದು ಸಹ ದೃಢವಾಗುತ್ತದೆ. ಆದುದರಿಂದಾಗಿ ದಿನಾಂಕ 10.05.1996 ರಲ್ಲಿ ಪಕೀರಪ್ಪ ರವರು ದಾವಾ ಸ್ವತ್ತಿನ ಸಂಬಂಧ ಕ್ರಯದ ಕರಾರು ಪತ್ರವನ್ನು ಜಾರಿಗೊಳಿಸಿದ ದಿನಾಂಕವೆ ದಾವಾ ಸ್ವತ್ತಿನ ಸ್ವಾಧೀನವನ್ನು 1 ನೇ ಪ್ರತಿವಾದಿಯ ತಂದೆಯಾದ ಶ್ರೀ

KACM210028032021

ಎ.ಎಸ್.ಪಕೀರಪ್ಪ ರವರಿಗೂ ಮತ್ತು 2 ನೇ ಪ್ರತಿವಾದಿಗಳ ಪರವಾಗಿ ಬಿಟ್ಟು ಕೊಟ್ಟಿರುವುದರಿಂದ ವಾದಿಯು ದಾವಾ ಸಲ್ಲಿಸುವ ವೇಳೆಗೆ ಅಂದರೆ ದಿನಾಂಕ 18.08.2021 ರಂದು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವ ಹೊಂದಿದ್ದರು ಎನ್ನುವ ಪ್ರಶ್ನೆಯೂ ಉದ್ಭವಿಸುವುದಿಲ್ಲ. ಆದುದರಿಂದಾಗಿ ವಿವಾದಾಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

10. **ವಿವಾದಾಂಶ 2 ಮತ್ತು 3** :: ಈ ಎರಡು ವಿವಾದಾಂಶಗಳು ಒಂದು ಚರ್ಚೆಯನ್ನು ಅವಲಂಬಿಸಿದ್ದು, ಆದುದರಿಂದಾಗಿ ಸಂಗತಿಗಳ ಪುನಾರ್ವತನೆಯನ್ನು ತಪ್ಪಿಸಲು ಈ ಎರಡು ವಿವಾದಾಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**10.1** ವಾದಿ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ, 1 ನೇ ಪ್ರತಿವಾದಿಯ ತಂದೆಯಾದ ಎ.ಎಸ್.ಪಕೀರಪ್ಪ ರವರು ಅಸಲು ದಾವಾ ಸಂಖ್ಯೆ:141/1997 ರಂತೆ ಹಾಗೂ 2 ನೇ ಪ್ರತಿವಾದಿಯು ಅಸಲು ದಾವಾ ಸಂಖ್ಯೆ:143/1997 ರಂತೆ ಕಡೂರಿನ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಕರಾರಿನ ನಿರ್ದಿಷ್ಟ ನೆರವೇರಿಕೆ ಕೋರಿ ಕೃಷ್ಣನಾಯ್ಕ ರವರ ಮೇಲೆ ದಾವೆ ಸಲ್ಲಿಸಿದ್ದು, ಸದರಿ ದಾವೆಗಳು ದಿನಾಂಕ 27.07.1998 ರಂದು ಡಿಕ್ರಿಯಾಗಿರುತ್ತವೆ. ಸದರಿ ತೀರ್ಪುಗಳ ಆದೇಶದಂತೆ ತೀರ್ಪಿನ ದಿನಾಂಕದಿಂದ 6 ತಿಂಗಳ ಒಳಗೆ ಪ್ರತಿವಾದಿಯು ಕ್ರಯ

ಪತ್ರವನ್ನು ನೋಂದಣಿಗೊಳಿಸದಿದ್ದಾಗ, ಸೂಕ್ತ ಕಾನೂನು ಪ್ರಕ್ರಿಯೆಯ ಮೂಲಕ ಸದರಿ ದಾವೆಯ ವಾದಿಗಳು ಕ್ರಯ ಪತ್ರವನ್ನು ನೋಂದಾಯಿಸಿಕೊಳ್ಳಬಹುದೆಂದು ಆದೇಶ ಮಾಡಿರುತ್ತದೆ. ಆದರೂ ಸಹ ಸದರಿ ತೀರ್ಪಿನ ದಿನಾಂಕದಿಂದ ಇಲ್ಲಿಯವರೆವಿಗೂ ಸಹ ಸದರಿ ಪಕೀರಪ್ಪ ಮತ್ತು 2 ನೇ ಪ್ರತಿವಾದಿಯು ಸದರಿ ದಾವೆಯ ತೀರ್ಪುಗಳ ಆದೇಶದಂತೆ ಅಮಲ್ಜಾರಿ ಅರ್ಜಿ ಸಲ್ಲಿಸದಿರುವುದರಿಂದ ಕಾಲಪರಿಮಿತಿ ಅಧಿನಿಯಮ ಅನುಚ್ಛೇದ 54 ಹಾಗೂ ಅನುಚ್ಛೇದ 136 ರಂತೆ ಪ್ರತಿವಾದಿಗಳ ಪ್ರತಿರಕ್ಷೆಯು ಕಾಲಪರಿಮಿತಿಯಲ್ಲಿರುವುದಿಲ್ಲವೆಂದು ವಾದಿಸಿರುತ್ತಾರೆ.

**10.2** ಕೃಷ್ಣನಾಯ್ಕ ಬಿನ್ ಭೀಮನಾಯ್ಕ ರವರು ದಿನಾಂಕ 10.05.1996 ರಲ್ಲಿ ದಾವಾ ಸರ್ವೆ ನಂ.205/ಪಿ9(ಹಳೆ ಸರ್ವೆ ನಂ.153/ಪಿ) ಒಟ್ಟು ವಿಸ್ತೀರ್ಣ 5 ಎಕರೆ 35 ಗುಂಟೆ ಪೈಕಿ ವಿಸ್ತೀರ್ಣ 2 ಎಕರೆ 35 ಗುಂಟೆ ಸ್ವತ್ತನ್ನು 1 ನೇ ಪ್ರತಿವಾದಿಯ ತಂದೆಯ ಪರವಾಗಿಯು ಹಾಗೂ ಉಳಿಕೆ 2 ಎಕರೆ 35 ಗುಂಟೆ ಸ್ವತ್ತನ್ನು 2 ನೇ ಪ್ರತಿವಾದಿಯ ಪರವಾಗಿಯು ಕ್ರಯದ ಕರಾರಿನ ಮೂಲಕ ಸ್ವಾಧೀನಕ್ಕೆ ನೀಡಿದ್ದರು ಎಂಬುವುದನ್ನು ಪ್ರತಿವಾದಿಗಳು ರುಜುವಾತುಪಡಿಸಿರುತ್ತಾರೆ. ಪ್ರಸ್ತುತ ದಾವೆಯಲ್ಲಿ ದಾವಾ ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತಿನಲ್ಲಿ ಯಾರು ಸ್ವಾಧೀನಾನುಭವ ಹೊಂದಿದ್ದಾರೆ ಎಂಬುವುದನ್ನು ಮಾತ್ರ

KACM210028032021

ನಿರ್ಧರಿಸಬೇಕಾಗಿದೆ. ಪಕೀರಪ್ಪ ಮತ್ತು 2 ನೇ ಪ್ರತಿವಾದಿಯು ಅಸಲು ದಾವಾ ಸಂಖ್ಯೆ:141/1997 ಮತ್ತು ಅಸಲು ದಾವಾ ಸಂಖ್ಯೆ:143/1997 ರ ತೀರ್ಪಿನಂತೆ ಕ್ರಯ ಪತ್ರಗಳ ನೋಂದಣಿ ಕೇಳಿ ಅಮಲ್ಜಾರಿ ಅರ್ಜಿ ಹಾಕಿಕೊಳ್ಳದ ವಿಚಾರವು ಈ ದಾವೆಯ ವಿವಾದಾಂಶಗಳ ನಿರ್ಣಯಕ್ಕೆ ಯಾವುದೇ ರೀತಿ ಸಂಬಂಧ ಕಲ್ಪಿಸುವುದಿಲ್ಲ. ಹಾಗಾಗಿ ಕೃಷ್ಣನಾಯ್ಕು ರವರು ಬರೆದುಕೊಟ್ಟಿರುವ ಕ್ರಯದ ಕರಾರು ಪತ್ರದಂತೆ 1 ನೇ ಪ್ರತಿವಾದಿಯ ತಂದೆ ಪಕೀರಪ್ಪ ಮತ್ತು 2 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವ ಹೊಂದಿರುವುದು ರುಜುವಾತಾಗಿರುವುದರಿಂದ, ಪ್ರತಿವಾದಿಗಳು ವಾದಿಯ ಸ್ವಾಧೀನಾನುಭವಕ್ಕೆ ತೊಂದರೆ ಮಾಡುವ ಸಂದರ್ಭವೇ ಉದ್ಭವಿಸುವುದಿಲ್ಲ. ಆದುದರಿಂದಾಗಿ ವಾದಿಯು ದಾವೆಯಲ್ಲಿ ಕೋರಲಾದಂತೆ ಪ್ರತಿಬಂಧಕಾಜ್ಞೆ ಪರಿಹಾರಕ್ಕೆ ಅರ್ಹರಿರುವುದಿಲ್ಲ. ಹಾಗಾಗಿ ವಿವಾದಾಂಶ – 2 ಮತ್ತು 3 ಅನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

11. **ವಿವಾದಾಂಶ–4** :: ಈ ಮೇಲಿನ ವಿವಾದಾಂಶ–1 ರಿಂದ 3 ರಲ್ಲಿ ಚರ್ಚಿಸಿದ ಕಾರಣಕ್ಕಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆಃ

**<u>ತೀರ್ಪು</u>**

ವಾದಿಯ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಲಾಗಿದೆ.

KACM210028032021

ಆದೇಶಕ್ಕನುಸಾರವಾಗಿ ಡಿಕ್ರಿ ಬರೆಯಲು ಸೂಚಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ಕೊಟ್ಟು ಬೆರಳಚ್ಚು ಮಾಡಿದ ನಂತರ ನಾನು ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ನಂತರ ಈ ದಿನ ಅಂದರೆ ದಿನಾಂಕ 06.07.2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ).

Sd/-

(ಡಿ.ಕೆ. ಮಂಜುನಾಥ ಚಾರಿ)
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,
ಕಡೂರು.

## ಅನುಬಂಧಗಳ ಪಟ್ಟಿ

**1) ವಾದಿಗಳ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿ:-**

ವಾ.ಸಾ-1 : ಶ್ರೀಮತಿ.ನಾನ್ಕಿಬಾಯಿ.

**2) ವಾದಿಗಳ ಪರ ನಿಶಾನೆಯಾದ ದಾಖಲೆಗಳ ಪಟ್ಟಿ:-**

ನಿಪಿ-1 : ಸರ್ವೆ ನಂ.205, ಸೋಮನಹಳ್ಳಿ ಗ್ರಾಮದ ಪಹಣಿಯನ್ನು
ನಿಪಿ-2 : ಸರ್ವೆ ನಂ.205/ಪಿ9, ಸೋಮನಹಳ್ಳಿ ಗ್ರಾಮದ ಮ್ಯೂಟೇಷನ್ ಪ್ರತಿ
ನಿಪಿ-3 : ಎಂ.ಆರ್.1/1980-81ರ ಹಕ್ಕು ಬದಲಾವಣೆ ವಹಿ

**3) ಪ್ರತಿವಾದಿಯ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿ:-**

ಪ್ರ.ಸಾ-1 : ಶ್ರೀ ಮಲ್ಲೇಶಪ್ಪ.

KACM210028032021

**4) ಪ್ರತಿವಾದಿಯ ಪರ ನಿಶಾನೆಯಾದ ದಾಖಲೆಗಳ ಪಟ್ಟಿ:-**

| | | |
|---|---|---|
| ನಿಡಿ-1-3 | : | ಓ ಎಸ್ 141/1997 ರ ವಾದಪತ್ರ, ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲು |
| ನಿಡಿ-4-6 | : | ಓ ಎಸ್ 143/1997 ರ ವಾದಪತ್ರ, ತೀರ್ಪು ಮತ್ತು ಡಿಕ್ರಿಯ ದೃಢೀಕೃತ ಪ್ರತಿ |
| ನಿಡಿ-7-8 | : | ಸೋಮನಹಳ್ಳಿ ಗ್ರಾಮದ ಸರ್ವೆ ನಂ.205/ಪಿ9 ರ ಪಹಣಿ ಹಾಗೂ 205 ರ ಪಹಣಿ |
| ನಿಡಿ-9 | : | ಎಂ.ಆರ್.ಹೆಚ್-43/2019-20 ರ ಪ್ರತಿ |
| ನಿಡಿ-10 | : | ಎಂ.ಆರ್.ಹೆಚ್-1/2080-81 ರ ದೃಢೀಕೃತ ಪ್ರತಿ |
| ನಿಡಿ-11 | : | ಸಿಂಗಟಗೆರೆ ಪೊಲೀಸ್ ಠಾಣೆಯವರು ನೀಡಿರುವ ಸ್ವೀಕೃತಿ |
| ನಿಡಿ-12-13 | : | ಹಣ ಸ್ವೀಕೃತಿ ಪತ್ರ ಮತ್ತು ರಶೀದಿ |
| ನಿಡಿ-14 | : | ಮರಣ ಪ್ರಮಾಣ ಪತ್ರ |
| ನಿಡಿ-15 | : | ಮರಣ ಪ್ರಮಾಣ ಪ್ರತಿ |
| ನಿಡಿ-16 | : | ರಶೀದಿ |
| ನಿಡಿ-17 | : | ದಿನಾಂಕ 17.03.1999 ರಂದು ವೈದ್ಯರು ನೀಡಿದ ಪ್ರಮಾಣ ಪತ್ರ |
| ನಿಡಿ-18 | : | ನಮೂನೆ-3 ರ ದೃಢೀಕೃತ ಪ್ರತಿ |
| ನಿಡಿ-19 | : | ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ನೀಡಿದ ಪತ್ರ |

KACM210028032021

ನಿಡಿ–20–22 : ನಿಯಮಿತ ಮೇಲ್ಮನವಿ ನಂ.166/2025 ರ ಆದೇಶದ ಪುಟದ ದೃಢೀಕೃತ ನಕಲನ್ನು, ನೋಟೀಸಿನ ದೃಢೀಕೃತ ಪ್ರತಿ, ಮೇಲ್ಮನವಿಯ ಅರ್ಜಿಯ ದೃಢೀಕೃತ ಪ್ರತಿ.

Sd/-

(ಡಿ ಕೆ ಮಂಜುನಾಥ ಚಾರಿ)
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.

Visit **ecourts.gov.in** for updates or download mobile app “**eCourts Services**” from Android or iOS